**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ರವರ ನ್ಯಾಯಾಲಯ, ಕೊಪ್ಪ</u>**

**<u>ಸಿ.ಸಿ. ನಂ. *324/2016*</u>**

***<u>ಫಿರ್ಯಾಧಿದಾರರುಃ</u>* ಸರ್ಕಾರದ ಪರವಾಗಿ ಆರ್. ಎಫ್.ಒ. ಕೊಪ್ಪ.**

**ವಿರುದ್ಧ**

***<u>ಆರೋಪಿ/ತರುಃ</u>*** 5. ಎಂ. ಮಂಜುನಾಥ ಬಿನ್ ಮರಿಯಪ್ಪ ನಾಯ್ಕ, ಸೀಗೋಡು, ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

- - -

**<u>ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ *313* ರ ಪ್ರಕಾರ ಆರೋಪಿಯ ಹೇಳಿಕೆಃ-</u>**

**ಪ್ರಃ1ಃ** ಅಭಿಯೋಜನೆಯವರ ಸಾಕ್ಷಿದಾರರು ನಿಮ್ಮ ವಿರುದ್ಧ ಕೊಟ್ಟಿರುವ ಹೇಳಿಕೆಗಳನ್ನು ಕೇಳಿದ್ದೀರಾ?

ಉಃ ಕೇಳಿದ್ದೇನೆ.

**ಪ್ರಃ2ಃ** 1 ನೇ ಸಾಕ್ಷಿದಾರರಾದ ಶ್ರೀ ಹೆಚ್.ಆರ್. ಕುಮಾರ, ವಲಯ ಅರಣ್ಯಾಧಿಕಾರಿಯವರು ಹೇಳುವುದೇನೆಂದರೆ ದಿನಾಂಕಃ17.10.1994 ರಂದು ಬೆಳಿಗ್ಗೆ 4 ಗಂಟೆ ಸಮಯದಲ್ಲಿ ತಾನು ಇತರೇ ಸಿಬ್ಬಂದಿಗಳೊಂದಿಗೆ ಕ್ಲಾಸಿಕ್ ಪ್ಲಾಂಟೇಷನ್ ಹತ್ತಿರ ಕಾಯುತ್ತಿದ್ದಾಗ ಕೊಪ್ಪ ಕಡೆಯಿಂದ ತೀರ್ಥಹಳ್ಳಿ ಕಡೆಗೆ ಒಂದು ಲಾರಿ ನಂಬರ್ ಎಂ.ಹೆಚ್ಃ12-ಕ್ಯೂ-2357 ಬಂತು, ಅದನ್ನು ನಿಲ್ಲಿಸಿ ತಪಾಸಿಸಲಾಗಿ ಅದರಲ್ಲಿ ಭತ್ತದ ಹಾಗೂ ಗೋಧಿ ಚೀಲಗಳ ಕೆಳಗೆ ಒಟ್ಟು 1095 ಕೆ.ಜಿ. ತೂಕದ 196 ಗಂಧದ ತುಂಡುಗಳು, 2 ಗೋಣಿ ಚೀಲದಲ್ಲಿ ಗಂಧದ ಚಕ್ಕೆಗಳು ಇದ್ದವು ಎಂದು ಸಾಕ್ಷಿ ಹೇಳಿದ್ದಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ ಸುಳ್ಳು

**ಪ್ರಃ3ಃ** ಅವರು ಮತ್ತೆ ಹೇಳುವುದೇನೆಂದರೆ, ಆ ಲಾರಿಯಲ್ಲಿ ಒಂದು ಮತ್ತು ಎರಡನೇ ಆರೋಪಿತರು ಮತ್ತು 3 ನೇ ಆರೋಪಿ ಮೊಹಿದ್ದೀನ್ ಇದ್ದರು, ಅವರನ್ನು ವಿಚಾರಿಸಲಾಗಿ ಗಂಧದ ತುಂಡುಗಳನ್ನು ಹೊಂದಿದ ಬಗ್ಗೆ

ಮತ್ತು ಸಾಗಿಸುವ ಬಗ್ಗೆ ಯಾವುದೇ ಪರ್ಮಿಟ್ ಇರಲಿಲ್ಲ, ಕಾರಣ ಸದರಿ ಗಂಧದ ತುಂಡುಗಳನ್ನು ಅಳತೆ ಮಾಡಿ ಅವುಗಳ ಮೇಲೆ ಕೆಎನ್‌ಎಫ್‌ಡಿ-ಎಫಒ 3 ಡಿಡಿ ಎನ್ನುವ ಹ್ಯಾಮರ್ ಗುರುತು ಹಾಕಿ, ಕ್ರಮಸಂಖ್ಯೆ ಮತ್ತು ಅಪರಾಧ ಸಂಖ್ಯೆಃ50/94-95 ನ್ನು ಬರೆದೆವು ಎಂದು ಸಾಕ್ಷಿ ಹೇಳಿದ್ದಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ ಸುಳ್ಳು

**ಪ್ರಃ4**ಃ ಅವರು ಮತ್ತೆ ಹೇಳುವುದೇನೆಂದರೆ, ಸದರಿ ಗಂಧದ ತುಂಡುಗಳನ್ನು ವಶಪಡಿಸಿಕೊಂಡು ನಿಪಿ.1 ರಂತೆ ಮಹಜರು ತಯಾರಿಸಿದೆವು. ಆನಂತರ 3 ನೇ ಆರೋಪಿ ಕೊಟ್ಟ ಹೇಳಿಕೆ ಪ್ರಕಾರ ಅವನು ತಮ್ಮನ್ನು ಸೀಗೋಡು ಗ್ರಾಮದಲ್ಲಿ 4 ನೇ ಆರೋಪಿಯ ಮಾವ ಮರಿಯಪ್ಪ ನಾಯಕನ ಮನೆಯ ಹತ್ತಿರ ಕರೆದುಕೊಂಡು ಹೋಗಿ, ಅಲ್ಲಿ 4 ನೇ ಆರೋಪಿ ಇದ್ದು, ಅವನನ್ನು ವಿಚಾರಿಸಲಾಗಿ ತನಗೂ ಈ ಪ್ರಕರಣಕ್ಕೂ ಸಂಬಂಧ ಇಲ್ಲ ಎಂದು ಓಡಿಹೋಗಲು ಪ್ರಯತ್ನಿಸಿದ ಅವನನ್ನು ತಮ್ಮ ಸಿಬ್ಬಂದಿ ಬೆನ್ನಟ್ಟಿ ಹಿಡಿದರು ಎಂದು ಸಾಕ್ಷಿ ಹೇಳಿದ್ದಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ ಸುಳ್ಳು

**ಪ್ರಃ5ಃ** ಅವರು ಮತ್ತೆ ಹೇಳುವುದೇನೆಂದರೆ, ನಂತರ ವಿಚಾರಿಸಲಾಗಿ 4 ನೇ ಆರೋಪಿಯು ತಾನು 1 ರಿಂದ 3 ನೇ ಆರೋಪಿತರ ವಾಹನದಲ್ಲಿ ಗಂಧದ ತುಂಡುಗಳನ್ನು ಹೇರಿ ಕಳುಹಿಸಿದ್ದು ನಿಜ ಎಂದು ಹೇಳಿ ಮನೆಯಿಂದ ನೂರು ಮೀಟರ್ ದೂರದ ಜಾಗಕ್ಕೆ ಕರೆದುಕೊಂಡು ಹೋಗಿದ್ದು, ಅಲ್ಲಿ ಪರಿಶೀಲಿಸಲಾಗಿ ಒಂದು ಸಿಗರೇಟ್ ಪ್ಯಾಕ್ ಹಾಳೆಯಲ್ಲಿ ವಾಹನ ಸಂಖ್ಯೆಃ ಎಂ.ಹೆಚ್ಃ12-ಕ್ಯೂಃ2357 ಎಂದು ಬರೆದಿದ್ದು ಸಿಕ್ಕಿತು ಮತ್ತು ಸ್ಥಳದಲ್ಲಿದ್ದ ಗಂಧದ ಚಕ್ಕೆಗಳು ಕಂಡು ಬಂದವು. ಅವುಗಳನ್ನು ಅಮಾನತುಪಡಿಸಿಕೊಂಡು ನಿಪಿ.2 ರಂತೆ ಮಹಜರ್ ತಯಾರಿಸಿದ್ದೇನೆ ಎಂದು ಸಾಕ್ಷಿ ಹೇಳಿದ್ದಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ ಸುಳ್ಳು

**ಪ್ರಃ6**ಃ ಅವರು ಮತ್ತೆ ಹೇಳುವುದೇನೆಂದರೆ, ಕೋರ್ಟಿನ ಮುಂದೆ ಮುದ್ದೆ ಮಾಲು-1 ಮತ್ತು 2 ರಲ್ಲಿ ಗಂಧದ ತುಂಡುಗಳು ಆ ದಿನ ವಶಪಡಿಸಿಕೊಂಡವುಗಳಾಗಿವೆ, ಅದೇ ದಿನ ತಾನು ಸದರಿ ಗಂಧದ ತುಂಡುಗಳನ್ನು ಪರಿಶೀಲಿಸಿ ನಿಪಿ.3 ರಂತೆ ಪ್ರಮಾಣಪತ್ರ ಕೊಟ್ಟಿದ್ದೇನೆಂದು ಸಾಕ್ಷಿ ಹೇಳಿದ್ದಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ ಸುಳ್ಳು

**ಪ್ರಃ7**ಃ 2 ನೇ ಸಾಕ್ಷಿದಾರರಾದ ಶ್ರೀ ಪ್ರಕಾಶ ಹೇಳುವುದೇನೆಂದರೆ, ದಿನಾಂಕಃ17.10.1994 ರಂದು ಬೆಳಿಗ್ಗೆ 4 ಗಂಟೆಗೆ ತಾನು ಇತರೆ ಸಿಬ್ಬಂದಿಯೊಂದಿಗೆ ತೀರ್ಥಹಳ್ಳಿ ರಸ್ತೆಯಲ್ಲಿ ಕ್ಲಾಸಿಕ್ ಪ್ಲಾಂಟೇಷನ್ ಹತ್ತಿರ ಕಾಯುತ್ತಿದ್ದಾಗ ಸುಮಾರು 7-50 ರಿಂದ 8-00 ಗಂಟೆ ಸಮಯದಲ್ಲಿ ಕೊಪ್ಪ ಕಡೆಯಿಂದ ಒಂದು ವಾಹನ ಸಂಖ್ಯೆ ಎಂ.ಹೆಚ್ಃ12-ಕ್ಯೂ-2357 ಬಂತು, ಅದರಲ್ಲಿ 1 ರಿಂದ 3 ನೇ ಆರೋಪಿತರು ಇದ್ದರು. ಆ ವಾಹನವನ್ನು ನಿಲ್ಲಿಸಿ ಪರಿಶೀಲಿಸಲಾಗಿ ಅದರಲ್ಲಿ ಬೂದಿ ತುಂಬಿದ ಚೀಲಗಳ ಕೆಳಗೆ ಒಟ್ಟು 1095 ಕೆ.ಜಿ. ತೂಕದ 196 ಗಂಧದ ತುಂಡುಗಳು, 2 ಮೂಟೆ ಗಂಧದ ಚಕ್ಕೆಗಳು ಇದ್ದವು. ಅವುಗಳನ್ನು ಸಾಗಿಸಲು ಆರೋಪಿತರ ಹತ್ತಿರ ಪರವಾನಗಿ ಇರಲಿಲ್ಲ ಎಂದು ಸಾಕ್ಷಿ ಹೇಳಿದ್ದಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ ಸುಳ್ಳು

**ಪ್ರಃ8**ಃ ಅವರು ಮತ್ತೆ ಹೇಳುವುದೇನೆಂದರೆ, 1 ನೇ ಆರೋಪಿ ಆ ವಾಹನದ ಚಾಲಕನಾಗಿದ್ದು, 2 ಮತ್ತು 3 ನೇ ಆರೋಪಿತರು ಅದರಲ್ಲಿದ್ದವರು ಆಗಿದ್ದಾರೆ. ನಂತರ ಸದರಿ ಗಂಧದ ತುಂಡುಗಳನ್ನು ಅಳತೆ ಮಾಡಿ, ಕ್ರಮ ಸಂಖ್ಯೆ ಕೊಟ್ಟು ಇಲಾಖೆಯ ಚಾಪಾ ಕೆಎನಎಫ್ಡಿ-ಎಫಓ 3 ಡಿಡಿ ಎಂದು ಹಾಕಿ, ಅಪರಾಧ ಸಂಖ್ಯೆಃ50/94-95 ನ್ನು ಬರೆದು, ನಿಪಿ.1 ರಂತೆ ಮಹಜರ್ ಬರೆದು ಅಮಾನತ್ತು ಪಡಿಸಿಕೊಂಡೆವು ಎಂದು ಸಾಕ್ಷಿ ಹೇಳಿದ್ದಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ ಸುಳ್ಳು

**ಪ್ರ:9**ಃ ಅವರು ಮತ್ತೆ ಹೇಳುವುದೇನೆಂದರೆ, 3 ನೇ ಆರೋಪಿಯ ಹೇಳಿಕೆ ಮೇರೆಗೆ ಅವನು ತಮ್ಮನ್ನು ಸೀಗೋಡು ಗ್ರಾಮದಲ್ಲಿ 4 ನೇ ಆರೋಪಿಯ ಮನೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿ 4 ನೇ ಆರೋಪಿಯನ್ನು ವಿಚಾರಿಸಲಾಗಿ ತನಗೂ ಪ್ರಕರಣಕ್ಕೂ ಸಂಬಂಧ ಇಲ್ಲ ಅಂತ ಹೇಳಿ ಓಡಿಹೋಗಲು ಪ್ರಯತ್ನಿಸಿದ್ದು, ಅವರು ಅವನನ್ನು ಹಿಡಿದು ವಿಚಾರಿಸಲಾಗಿ ತಾನು ಮತ್ತು ತನ್ನ ಭಾವ ಮಂಜುನಾಥ ಸೇರಿ ವಾಹನದಲ್ಲಿ ಗಂಧದ ತುಂಡುಗಳನ್ನು ತುಂಬಿದ್ದು ನಿಜ ಎಂದು ಒಪ್ಪಿಕೊಂಡರು ಎಂದು ಸಾಕ್ಷಿ ಹೇಳಿದ್ದಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ ಸುಳ್ಳು

**ಪ್ರ:10**ಃ ಅವರು ಮತ್ತೆ ಹೇಳುವುದೇನೆಂದರೆ, 4 ನೇ ಆರೋಪಿಯು ಆ ಮನೆಯಿಂದ 100 ಮೀಟರ್ ದೂರದಲ್ಲಿ ಇರುವ ಕಾಫಿ ತೋಟದಲ್ಲಿ ಒಂದು ಜಾಗಕ್ಕೆ ಕರೆದುಕೊಂಡು ಹೋಗಿದ್ದು, ಅಲ್ಲಿ ಪರಿಶೀಲಿಸಲಾಗಿ ವಾಹನ ಓಡಾಡಿದ ಗುರುತು ಇತ್ತು ಮತ್ತು ಸ್ಥಳದಲ್ಲಿ ಸಣ್ಣ ಸಣ್ಣ ಗಂಧದ ಚಕ್ಕೆಗಳು ಬಿದ್ದಿದ್ದವು. ಅಲ್ಲಿಯೇ ನಿಪಿ.4 ರಲ್ಲಿರುವ ಚಾರ್ ಮಿನಾರ್ ಸಿಗರೇಟ್ ಪ್ಯಾಕ್‌ನ ಹಾಳೆಯಲ್ಲಿ ಮೇಲೆ ಹೇಳಿದ ವಾಹನದ ಸಂಖ್ಯೆ ಬರೆದಿತ್ತು. ಅವುಗಳನ್ನು ಅಮಾನತುಪಡಿಸಿಕೊಂಡು ನಿಪಿ.2 ರಂತೆ ಮಹಜರು ಬರೆದೆವು ಎಂದು ಸಾಕ್ಷಿ ಹೇಳಿದ್ದಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ ಸುಳ್ಳು

**ಪ್ರ:11**ಃ ಅವರು ಮತ್ತೆ ಹೇಳುವುದೇನೆಂದರೆ, ಕೋರ್ಟಿನ ಮುಂದೆ ಮುದ್ದೆ ಮಾಲು-1 ಮತ್ತು 2 ರಲ್ಲಿರುವ ಗಂಧದ ತುಂಡುಗಳು ಆ ದಿನ ಅಮಾನತುಪಡಿಸಿಕೊಂಡವುಗಳು ಕ್ರಮ ಸಂಖ್ಯೆ1 ರಿಂದ 196 ನೇಯವುಗಳಾಗಿವೆ ಎಂದು ಸಾಕ್ಷಿ ಹೇಳಿದ್ದಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ ಸುಳ್ಳು

**ಪ್ರ:12ಃ** 3ನೇ ಸಾಕ್ಷಿದಾರರಾದ ಶ್ರೀ ಭೋಜರಾಜ ಹೇಳುವುದೇನೆಂದರೆ, ದಿನಾಂಕಃ17.10.1994 ರಂದು ಬೆಳಿಗ್ಗೆ 7-30ರಿಂದ ಕ್ಲಾಸಿಕ್ ಪ್ಲಾಂಟೇಷನ್ ಹತ್ತಿರ ಕಾಯುತ್ತಿದ್ದಾಗ 8-00 ಗಂಟೆ ಸುಮಾರಿಗೆ ಕೊಪ್ಪ ಕಡೆಯಿಂದ ವಾಹನ ಸಂಖ್ಯೆ ಎಂ.ಹೆಚ್ಃ12-ಕ್ಯೂ-2357 ಬಂದಿದ್ದು, 1ನೇ ಆರೋಪಿ ಅದರ ಚಾಲಕನಾಗಿದ್ದು, 2 ಮತ್ತು 3ನೇ ಆರೋಪಿತರು ಅದರಲ್ಲಿದ್ದರು ಎಂದು ಸಾಕ್ಷಿ ಹೇಳಿದ್ದಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ ಸುಳ್ಳು

**ಪ್ರ:13ಃ** ಅವರು ಮತ್ತೆ ಹೇಳುವುದೇನೆಂದರೆ, ಆ ವಾಹನವನ್ನು ಪರಿಶೀಲಿಸಲಾಗಿ ಅದರಲ್ಲಿ ಬೂದಿ ತುಂಬಿದ ಚೀಲಗಳ ಕೆಳಗೆ 196 ಗಂಧದ ತುಂಡುಗಳು ಮತ್ತು 2 ಗೋಣಿ ಚೀಲದಲ್ಲಿ ಗಂಧದ ಚಕ್ಕೆಗಳು ಇದ್ದವು. ಅವುಗಳನ್ನು ಸಾಗಿಸಲು ಯಾವುದೇ ಪರವಾನಗಿ ಆರೋಪಿತರ ಹತ್ತಿರ ಇರಲಿಲ್ಲ ಎಂದು ಸಾಕ್ಷಿ ಹೇಳಿದ್ದಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ ಸುಳ್ಳು

**ಪ್ರ:14ಃ** ಅವರು ಮತ್ತೆ ಹೇಳುವುದೇನೆಂದರೆ, ಸದರಿ ಗಂಧದ ತುಂಡುಗಳಿಗೆ 1 ರಿಂದ 196ರ ವರೆಗೆ ಕ್ರಮಸಂಖ್ಯೆ ಕೊಟ್ಟು, ಅಳತೆ ಮಾಡಿ, ಅವುಗಳ ಮೇಲೆ ಕೆಎನಎಫ್‌ಡಿ-ಎಫಟ 3ಡಿಡಿ ಎನ್ನುವ ಇಲಾಖೆಯ ಛಾಪಾ ಹಾಕಿ, ತೂಕ ಮಾಡಿ, ಅಪರಾಧ ಸಂಖ್ಯೆಃ50/94-95ನ್ನು ನೋಂದಾಯಿಸಿಕೊಂಡು, ನಿಪಿ.1ರಂತೆ ಮಹಜರ್ ಬರೆದು, ಅಮಾನತುಪಡಿಸಿಕೊಂಡೆವು ಎಂದು ಸಾಕ್ಷಿ ಹೇಳಿದ್ದಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ ಸುಳ್ಳು

**ಪ್ರ:15ಃ** ಅವರು ಮತ್ತೆ ಹೇಳುವುದೇನೆಂದರೆ, 3ನೇ ಆರೋಪಿಯ ಹೇಳಿಕೆ ಮೇರೆಗೆ ಅವನು ತಮ್ಮನ್ನು 4ನೇ ಆರೋಪಿ ವಾಸ ಮಾಡುತ್ತಿದ್ದ ಅವರ ಮಾವ ಮರಿಯಪ್ಪ ನಾಯಕರ ಮನೆಗೆ ಕರೆದುಕೊಂಡು ಹೋಗಿದ್ದು, 4ನೇ ಆರೋಪಿಯನ್ನು ಹೊರಗೆ ಕರೆದು, ಅವನನ್ನು ವಿಚಾರಿಸಲಾಗಿ ಅದಕ್ಕೂ ಹಾಗೂ ತನಗೂ ಸಂಬಂಧ ಇಲ್ಲ ಎಂದು ಹೇಳಿ ಓಡಿ ಹೋಗಲು

ಪ್ರಯತ್ನಿಸಿದ್ದು, ಆಗ ಅವನನ್ನು ಬೆನ್ನಟ್ಟಿ ಹಿಡಿದೆವು ಎಂದು ಸಾಕ್ಷಿ ಹೇಳಿದ್ದಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ ಸುಳ್ಳು

**ಪ್ರಃ16ಃ** ಅವರು ಮತ್ತೆ ಹೇಳುವುದೇನೆಂದರೆ, 4 ನೇ ಆರೋಪಿಯನ್ನು ಮತ್ತೆ ವಿಚಾರಿಸಲಾಗಿ ತಾನು ಗಂಧವನ್ನು ತುಂಬಿದ್ದು ನಿಜ ಎಂದು ಹೇಳಿ ಮನೆಯಿಂದ 100 ಅಡಿ ದೂರದ ಒಂದು ಜಾಗಕ್ಕೆ ಕರೆದುಕೊಂಡು ಹೋಗಿ ತೋರಿಸಿದ್ದು, ಅಲ್ಲಿ ಗಂಧದ ಚಕ್ಕೆಗಳು ಬಿದ್ದಿದ್ದವು ಮತ್ತು ಒಂದು ಚಾರ್ ಮಿನಾರ್ ಸಿಗರೇಟ್ ಪ್ಯಾಕ್ ನ ಕಾಗದದ ಮೇಲೆ ಎಂ.ಹೆಚ್ಃ12-ಕ್ಯೂ-2357 ಎಂದು ಬರೆದಿದ್ದು ಕಂಡು ಬಂತು. ಕಾರಣ ಅವುಗಳನ್ನು ವಶಪಡಿಸಿಕೊಂಡು ನಿಪಿ.2 ರಂತೆ ಮಹಜರ್ ತಯಾರಿಸಿದೆವು, ಕೋರ್ಟಿನ ಮುಂದೆ ಮುದ್ದೆ ಮಾಲು-1 ಮತ್ತು 2 ರಲ್ಲಿರುವ ಗಂಧದ ತುಂಡುಗಳು ಆ ದಿನ ವಾಹನದಿಂದ ಅಮಾನತುಪಡಿಸಿಕೊಂಡವುಗಳ ಪೈಕಿಯವು ಆಗಿವೆ ಎಂದು ಸಾಕ್ಷಿ ಹೇಳಿದ್ದಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ ಸುಳ್ಳು

**ಪ್ರಃ17ಃ** 4 ನೇ ಸಾಕ್ಷಿದಾರರಾದ ಶ್ರೀ ಪಿ. ಸುರೇಶ್ ಶೆಟ್ಟಿ, ವಲಯ ಅರಣ್ಯಾಧಿಕಾರಿಗಳು, ಹೇಳುವುದೇನೆಂದರೆ ದಿನಾಂಕಃ17.10.1994 ರಂದು ಬೆಳಿಗ್ಗೆ 4 ಗಂಟೆ ಸುಮಾರಿಗೆ ಕ್ಲಾಸಿಕ್ ಪ್ಲಾಂಟೇಷನ್ ಹತ್ತಿರ ಕಾಯುತ್ತಿದ್ದಾಗ ಕೊಪ್ಪ ಕಡೆಯಿಂದ ವಾಹನ ಸಂಖ್ಯೆ ಎಂ.ಹೆಚ್ಃ12-ಕ್ಯೂ-2357 ಬಂತು, 1 ನೇ ಆರೋಪಿ ಅದರ ಚಾಲಕನಾಗಿದ್ದು, 2 ನೇ ಆರೋಪಿ ಕ್ಲೀನರ್ ಆಗಿದ್ದು ಮತ್ತು 3 ನೇ ಆರೋಪಿ ಸಹಾ ಅದರಲ್ಲಿದ್ದರು ಎಂದು ಸಾಕ್ಷಿ ಹೇಳಿದ್ದಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ ಸುಳ್ಳು

**ಪ್ರ:18ಃ** ಅವರು ಮತ್ತೆ ಹೇಳುವುದೇನೆಂದರೆ, ಸದರಿ ವಾಹನವನ್ನು ಪರಿಶೀಲಿಸಲಾಗಿ ಅದರಲ್ಲಿ ಬೂದಿ ತುಂಬಿದ ಚೀಲಗಳು ಇದ್ದವು, ಅವುಗಳ ಕೆಳಗೆ 1095 ಕೆ.ಜಿ. ತೂಕದ 196 ಗಂಧದ ತುಂಡುಗಳು ಇದ್ದವು. ಅವುಗಳನ್ನು ಹೊಂದಿದ ಬಗ್ಗೆ ಆರೋಪಿತರ ಹತ್ತಿರ ಯಾವುದೇ ಪರವಾನಗಿ ಇರಲಿಲ್ಲ. ಕಾರಣ ಅವುಗಳನ್ನು ಅಳತೆ ಮಾಡಿ ಎಫ್‌ಒಸಿಃನಂಃ50ಃ94/95 ಅನ್ನು ಕೆಂಪು ಬಣ್ಣದಲ್ಲಿ ನಮೂದಿಸಿ, ಅವುಗಳ ಮೇಲೆ ಇಲಾಖೆಯ ಛಾಪಾ ಕೆಎನ್‌ಎಫ್‌ಡಿ-ಎಫಒ 3 ಡಿಡಿ ಎಂದು ಹಾಕಿ, ನಿಪಿ.1 ರಂತೆ ಮಹಜರ್ ಬರೆದು, ಅಮಾನತುಪಡಿಸಿಕೊಂಡೆವು ಎಂದು ಸಾಕ್ಷಿ ಹೇಳಿದ್ದಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ ಸುಳ್ಳು

**ಪ್ರ:19ಃ** ಅವರು ಮತ್ತೆ ಹೇಳುವುದೇನೆಂದರೆ, 3 ನೇ ಆರೋಪಿ ಮೊಹಿದ್ದೀನ್‌ರವರ ಹೇಳಿಕೆ ಪ್ರಕಾರ ಅವನು ತಮ್ಮನ್ನು 4 ನೇ ಆರೋಪಿಯ ಮನೆ ಹತ್ತಿರ ಕರೆದುಕೊಂಡು ಹೋಗಿದ್ದು, 4 ನೇ ಆರೋಪಿಯನ್ನು ವಿಚಾರಿಸಿದಾಗ ಓಡಿಹೋಗಲು ಪ್ರಾರಂಭಿಸಿದ ಅವನನ್ನು ಹಿಡಿದು ವಿಚಾರಿಸಲಾಗಿ, ತಾನು ಹಿಂದಿನ ದಿನ ಗಂಧದ ಕಟ್ಟಿಗೆ ತುಂಬಿದ್ದು ನಿಜ ಎಂದು ಒಪ್ಪಿ, ತಾನು ಮತ್ತು ಪರಾರಿ 5 ನೇ ಆರೋಪಿ ತುಂಬಿ ಕಳುಹಿಸಿದ್ದೇವೆಂದು ಒಪ್ಪಿರುತ್ತಾರೆ ಎಂದು ಸಾಕ್ಷಿ ಹೇಳಿದ್ದಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ ಸುಳ್ಳು

**ಪ್ರ:20ಃ** ಅವರು ಮತ್ತೆ ಹೇಳುವುದೇನೆಂದರೆ, ಸದರಿ ಮನೆಯಿಂದ 100 ಮೀಟರ್ ದೂರದಲ್ಲಿರುವ ಒಂದು ಜಾಗಕ್ಕೆ ಕರೆದುಕೊಂಡು ಹೋಗಿ ತೋರಿಸಿದ್ದು ಅಲ್ಲಿ ಶ್ರೀಗಂಧದ ಚಕ್ಕೆಗಳು ಬಿದ್ದಿದ್ದವು ಮತ್ತು ನಿಪಿ.4 ರಲ್ಲಿರುವ ಚಾರ್ ಮಿನಾರ್ ಸಿಗರೇಟ್ ಪ್ಯಾಕ್ ನ ಹಾಳೆಯು ಬಿದ್ದಿದ್ದು ಅವುಗಳನ್ನು ಅಮಾನತುಪಡಿಸಿಕೊಂಡು, ನಿಪಿ.2 ರಂತೆ ಮಹಜರ್ ತಯಾರಿಸಿದೆವು ಎಂದು ಸಾಕ್ಷಿ ಹೇಳಿದ್ದಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ ಸುಳ್ಳು

**ಪ್ರಃ21ಃ** ಅವರು ಮತ್ತೆ ಹೇಳುವುದೇನೆಂದರೆ, ತಾನು 1 ರಿಂದ 4ನೇ ಆರೋಪಿತರ ಹೇಳಿಕೆಗಳನ್ನು ನಿಪಿ.5 ರಿಂದ ನಿಪಿ.8 ರಂತೆ ದಾಖಲು ಮಾಡಿಕೊಂಡಿದ್ದೇನೆ ಮತ್ತು ಕೋರ್ಟಿನ ಮುಂದೆ ಮುದ್ದೆ ಮಾಲು-1 ಮತ್ತು 2ರಲ್ಲಿರುವ ಗಂಧದ ತುಂಡುಗಳು ಆ ದಿನ ವಶಪಡಿಸಿಕೊಂಡವುಗಳು ಪೈಕಿಯವುಗಳು ಆಗಿವೆ ಎಂದು ಸಾಕ್ಷಿ ಹೇಳಿದ್ದಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ ಸುಳ್ಳು

**ಪ್ರಃ22**ಃ ಅವರು ಮತ್ತೆ ಹೇಳುವುದೇನೆಂದರೆ, ನಂತರ 1 ರಿಂದ 4ನೇ ಆರೋಪಿತರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಮತ್ತು ತನಿಖೆ ಪೂರೈಸಿ ಡಿಎಫಓ ಅವರಿಂದ ನಿಪ.1ರಂತೆ ಪರವಾನಗಿ ಪಡೆದು ದೋಷಾರೋಪಣಾ ಪತ್ರ ಸಲ್ಲಿಸಿದ್ದೇನೆ ಮತ್ತು ಇನ್ನುಳಿದ ಗಂಧದ ತುಂಡುಗಳನ್ನು ನ್ಯಾಯಾಲಯದ ಅನುಮತಿ ಪಡೆದು ಅವುಗಳನ್ನು ತನ್ನ ವಶದಲ್ಲಿಟ್ಟುಕೊಂಡಿದ್ದೆನೆಂದು ಸಾಕ್ಷಿ ಹೇಳಿದ್ದಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃಸುಳ್ಳು

**ಪ್ರಃ23**ಃ ನಿಮಗೆ ಈ ಕೇಸಿನ ಬಗ್ಗೆ ಮತ್ತೆ ಏನಾದರೂ ಹೇಳುವುದು ಇದೆಯೆ?

ಉಃ ಇಲ್ಲ

**ಪ್ರ:24**ಃ ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಏನಾದರೂ ಹೇಳುವುದು ಇದೆಯೆ?

ಉಃ ಇಲ್ಲ

ಈ ಮೇಲ್ಕಂಡ ಹೇಳಿಕೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರ ಹೇಳಿಕೆಯನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ 18.07.2026.

ಸಹಿ/- xxxx 18.07.2026.
(ಶ್ರೀಮತಿ ನಂದಿನಿ ಎಂ.ಎನ್.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧನ್ಯಾದಂಃ ಕೊಪ್ಪ.